**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:DCE/TRN/PPS/4/2022/TDG

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:10-11-2022.

# ಸುತ್ತೋಲೆ

ವಿಷಯ: ಇಎಂಐಎಸ್ ತಂತ್ರಾಂಶದಲ್ಲಿ ಬೋಧಕರ ಸೇವಾವಿವರ ಮತ್ತು ಕಾರ್ಯಭಾರ ವಿವರಗಳನ್ನು ದಾಖಲಿಸುವ ಬಗ್ಗೆ.

*******

ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳ ಸೇವಾ ವಿವರ ಮತ್ತು ಕಾರ್ಯಭಾರ ವಿವರಗಳನ್ನು ಈ ಕೆಳಕಂಡ ಅಂಶಗಳ ಬಗ್ಗೆ ವೈಯಕ್ತಿಕ ಗಮನಹರಿಸಿ ಮಾಹಿತಿಯನ್ನು ನಿಖರವಾಗಿ **ದಿನಾಂಕ:20-11-2022ರ ಒಳಗಾಗಿ ಕಡ್ಡಾಯವಾಗಿ EMIS ತಂತ್ರಾಶದಲ್ಲಿ** ಅಪ್‌ಲೋಡ್ ಮಾಡಲು ಹಾಗೂ ಈಗಾಗಲೇ ಅಪ್‌ಲೋಡ್ ಮಾಡಲಾಗಿರುವ ಮಾಹಿತಿಗಳು ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ.

- ಕಾಲೇಜಿನಲ್ಲಿ ಬೋಧಿಸುತ್ತಿರುವ ವಿವಿಧ ವಿಷಯಗಳ **2022-2023ನೇ** ಸಾಲಿನ ಕಾರ್ಯಭಾರ ವಿವರಗಳನ್ನು ನಿಯಮಾನುಸಾರ ನಿಖರವಾಗಿ ತಂತ್ರಾಂಶದಲ್ಲಿ ನಮೂದಿಸುವುದು.
- 2022ನೇ ಸಾಲಿನಲ್ಲಿ ವರ್ಗಾವಣೆಗೊಂಡ/ಹುದ್ದೆಸಹಿತ ಸ್ಥಳಾಂತರಗೊಂಡ ಬೋಧಕರ ಸೇವಾ ವಿವರಗಳನ್ನು ಕಡ್ಡಾಯವಾಗಿ ತಪ್ಪಿಲ್ಲದಂತೆ ನಮೂದಿಸುವುದು.
- ಬೋಧಕ ಸಿಬ್ಬಂದಿ ವರ್ಗದವರ ಜನ್ಮ ದಿನಾಂಕ, ನೇಮಕಾತಿ ಹೊಂದಿದ ದಿನಾಂಕ ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕವನ್ನು **(dd-mm-yyyy)** ತಪ್ಪಿಲ್ಲದಂತೆ ಕಡ್ಡಾಯವಾಗಿ ನಮೂದಿಸುವುದು.
- ಬೋಧಕ ಸಿಬ್ಬಂದಿ ವರ್ಗದವರು ಹಿಂದೆ ಕಾರ್ಯನಿರ್ವಹಿಸಿದ ಕಾಲೇಜು ವಿವರ ಮತ್ತು ದಿನಾಂಕವನ್ನು **(dd-mm-yyyy)** ತಪ್ಪಿಲ್ಲದಂತೆ ಕಡ್ಡಾಯವಾಗಿ ನಮೂದಿಸುವುದು. (Service History)
- ವಯೋ/ಸ್ವಇಚ್ಛಾನಿವೃತ್ತಿ/ರಾಜೀನಾಮೆ/ಅನ್ಯ ಇಲಾಖೆಗಳಿಗೆ ನೇಮಕಾತಿ ಹೊಂದಿದ/ವಜಾ/ಮರಣ ಇತ್ಯಾದಿ ಕಾರಣಗಳಿಂದ ಸರ್ಕಾರಿ/ಇಲಾಖಾ ಸೇವೆಯಿಂದ ಬಿಡುಗಡೆ ಮಾಡಲಾದ/ ತೆಗೆದುಹಾಕಲ್ಪಟ್ಟ ನೌಕರರ ಮಾಹಿತಿಯನ್ನು ತಕ್ಷಣ **EMIS**ನಿಂದ ಕಡ್ಡಾಯವಾಗಿ ತೆಗೆದು ಹಾಕುವುದು **(Delete)**.
- ಖಾಸಗಿ ಅನುದಾನಿತ ಕಾಲೇಜಿನಿಂದ ಮರುಹಂಚಿಕೆ ಹೊಂದಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರರ ವಿವರಗಳನ್ನು ಇ.ಎಂ.ಐ.ಎಸ್.ನಲ್ಲಿ **Re-deployed from Private Aided College** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ಅಪ್‌ಲೋಡ್ ಮಾಡಿರುವ ಮಾಹಿತಿಗಳಲ್ಲಿ ಯಾವುದೇ ರೀತಿಯ ತಪ್ಪುಗಳು ಕಂಡು ಬಂದಲ್ಲಿ ಹಾಗೂ ಅಸಂಗತ ಮಾಹಿತಿಗಳನ್ನು ಇ.ಎಂ.ಐ.ಎಸ್.ನಲ್ಲಿ **Upload** ಮಾಡಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಿ ಶಿಸ್ತುಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

14/11/2022

**ಮುಖ್ಯ ಆಡಳಿತಾಧಿಕಾರಿಗಳು**
ಕಾಲೇಜು ಶಿಕ್ಷಣ ಇಲಾಖೆ

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಭಾರ ಪ್ರಾಂಶುಪಾಲರುಗಳಿಗೆ-ಮಾಹಿತಿ ಮತ್ತು ಅಗತ್ಯಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು ಹಾಗೂ ಮೇಲ್ಕಂಡ ವಿವರಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ಮಾಡಿಕೊಡಲು.
4. ಮ್ಯಾನೇಜರ್/ಅಧೀಕ್ಷಕರು, ಸೇವಾ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು.
4. ಹೆಚ್ಚುವರಿ ಪ್ರತಿ.
5. ಕಛೇರಿ ಪ್ರತಿ.

04 EMIS UPDATE